ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101
RaithaBhavana, General Cariappa Circle, Gadag – 582 101
E-mail: ksrdpruadmissions@gmail.com Phone: 08372-230338, Fax: 08372-297343

News about MLC Shri. S.V Sankanur Visited Neravu Covid Helplone Center Published in Various Kannada Daily Newspapers Date:20.05.2021

## ಕೋವಿಡ್ ಸಹಾಯವಾಣಿ ಕೇಂದ್ರಕ್ಕೆ ಸಂಕನೂರ ಭೇಟಿ

■ **ವಿಕ ಸುದ್ದಿಲೋಕ** ಗದಗ

ಜಿಲ್ಲೆಯಲ್ಲಿ 10 ದಿನದಿಂದ ಕೋವಿಡ್ ಸೋಂಕಿತರಿಗೆ ಬೆಡ್ ಹಾಗೂ ಆಂಬ್ಯುಲೆನ್ಸ್ ಒದಗಿಸುವಲ್ಲಿ ಮತ್ತು ಲಸಿಕೆ ಕುರಿತು ಮಾಹಿತಿ ನೀಡುವಲ್ಲಿ ಕೋವಿಡ್ ಸಹಾಯವಾಣಿ ಕೇಂದ್ರದ ಸಿಬ್ಬಂದಿ 24 ಗಂಟೆ ಕಾರ್ಯ ನಿರ್ವಹಿಸುತ್ತಿರುವುದನ್ನು ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಶ್ಲಾಘಿಸಿದ್ದಾರೆ.

ಇಲ್ಲಿನ ನಗರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯದ ಕಟ್ಟಡದಲ್ಲಿ ಪ್ರಾರಂಭವಾಗಿರುವ ಕೋವಿಡ್ ಸಹಾಯವಾಣಿ ಕೇಂದ್ರಕ್ಕೆ ಭೇಟಿ ನೀಡಿ ಕಾರ್ಯ ಚಟುವಟಿಕೆ ಕುರಿತು ಮಾಹಿತಿ ಸಂಗ್ರಹಿಸಿದರು.

ಸಹಾಯವಾಣಿ ಕೇಂದ್ರದಲ್ಲಿ 9 ಜನರ ಒಂದು ತಂಡದಂತೆ 3 ತಂಡದಲ್ಲಿ ಹಗಲಿರುಳು ಕೆಲಸ ಮಾಡುತ್ತಿರುವ ವಿಶ್ವವಿದ್ಯಾಲಯದ ಸಿಬ್ಬಂದಿ ಸಾರ್ವಜನಿಕರಿಂದ ಬರುವ ಕರೆಗಳಿಗೆ ಸಮಾಧಾನದಿಂದ ಮಾಹಿತಿ ನೀಡುವುದನ್ನು ಗಮನಿಸಿದರು. ಡಿಡಿಎಲ್‌ಆರ್ ರವಿಕುಮಾರ, ಪ್ರವೀಣ ಅಂಕಲಕೋಟಿ, ಡಾ.ನಾಗವೇಣಿ ಸಹಾಯವಾಣಿ ಕೇಂದ್ರದ ಕುರಿತು ಮಾಹಿತಿ ನೀಡಿದರು. ದ್ರಾಕ್ಷಾರಸ ನಿಗಮದ ಅಧ್ಯಕ್ಷ ಕಾಂತಿಲಾಲ ಬನ್ಸಾಲಿ ಇದ್ದರು.



ಗದಗ ನಗರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕಟ್ಟಡದಲ್ಲಿ ಪ್ರಾರಂಭವಾಗಿರುವ ಕೋವಿಡ್ ಸಹಾಯವಾಣಿ ಕೇಂದ್ರಕ್ಕೆ ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು.

## ಸಹಾಯವಾಣಿ ಕೇಂದ್ರಕ್ಕೆ ಸಂಕನೂರ ಭೇಟಿ

ಪ್ರಜಾವಾಣಿ ವಾರ್ತೆ

ಗದಗ: ಕೋವಿಡ್ ಸೋಂಕಿತರಿಗೆ ಅಗತ್ಯವಿರುವ ಹಾಸಿಗೆ ಹಾಗೂ ಆಂಬುಲೆನ್ಸ್ ಒದಗಿಸುವುದು ಮತ್ತು ಲಸಿಕೆ ಕುರಿತು ಮಾಹಿತಿ ನೀಡುವಲ್ಲಿ ಕೋವಿಡ್ ಸಹಾಯವಾಣಿ ಕೇಂದ್ರದ ಸಿಬ್ಬಂದಿ ದಿನದ 24 ಗಂಟೆಗಳ ಕಾಲ ಕೆಲಸ ನಿರ್ವಹಿಸುತ್ತಿರುವುದನ್ನು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಶ್ಲಾಘಿಸಿದರು.

ನಗರದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕಟ್ಟಡದಲ್ಲಿ ಪ್ರಾರಂಭವಾಗಿರುವ ಕೋವಿಡ್ ಸಹಾಯವಾಣಿ ಕೇಂದ್ರಕ್ಕೆ ಬುಧವಾರ ಭೇಟಿ ನೀಡಿ, ಅಲ್ಲಿನ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಸಂಗ್ರಹಿಸಿದರು.

ಸಹಾಯವಾಣಿ ಕೇಂದ್ರದಲ್ಲಿ 9 ಜನರ ತಂಡ, ಮೂರು ಪಾಳಿಯಲ್ಲಿ ಹಗಲಿರುಳು ಕೆಲಸ ಮಾಡುತ್ತಿದ್ದಾರೆ. ವಿಶ್ವವಿದ್ಯಾಲಯದ ಸಿಬ್ಬಂದಿ ಸಾರ್ವಜನಿಕರಿಂದ ಬರುವ ಕರೆಗಳಿಗೆ ಸಮಾಧಾನದಿಂದ ಮಾಹಿತಿ ನೀಡುವುದನ್ನು ಗಮನಿಸಿದರು.

ಡಿಡಿಎಲ್‌ಆರ್ ರವಿಕುಮಾರ, ಪ್ರಾಧ್ಯಾಪಕರಾದ ಪ್ರವೀಣ ಅಂಕಲಕೋಟಿ, ಡಾ.ನಾಗವೇಣಿ ಸಹಾಯವಾಣಿ ಕೇಂದ್ರದ ಕುರಿತು ಮಾಹಿತಿ ನೀಡಿದರು.

ದ್ರಾಕ್ಷಾರಸ ನಿಗಮದ ಅಧ್ಯಕ್ಷ ಕಾಂತಿಲಾಲ ಬನ್ಸಾಲಿ ಇದ್ದರು.



ವಿಧಾನ ಪರಿಷತ್ ಸದಸ್ಯ ಕೋವಿಡ್ ಸಹಾಯವಾಣಿ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು

# ಕೋವಿಡ್ ಸಹಾಯವಾಣಿ ಕೇಂದ್ರಕ್ಕೆ ಸಂಕನೂರ ಭೇಟಿ



ಗದಗ, ೧೯ : ಜಿಲ್ಲೆಯಲ್ಲಿ ಕಳೆದ ೧೦ ದಿನಗಳಿಂದ ಕೊವಿಡ್ ಸೊಂಕಿತರಿಗೆ ಬೆಡ್ ಹಾಗೂ ಆ್ಯಂಬುಲೆನ್ಸ್ ಒದಗಿಸುವಲ್ಲಿ ಮತ್ತು ಲಸಿಕೆ ಕುರಿತು ಮಾಹಿತಿ ನೀಡುವಲ್ಲಿ ಕೊವಿಡ್ ಸಹಾಯವಾಣಿ ಕೇಂದ್ರದ ಸಿಬ್ಬಂದಿ ೨೪ ಗಂಟೆಗಳ ಕಾಲ ಕಾರ್ಯ ಮಾಡುತ್ತಿರುವುದನ್ನು ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಶ್ಲ್ಯಾಘಿಸಿದ್ದಾರೆ.

ನಗರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ಕಟ್ಟಡದಲ್ಲಿ ಪ್ರಾರಂಭವಾಗಿರುವ ಕೊವಿಡ್ ಸಹಾಯವಾಣಿ ಕೇಂದ್ರಕ್ಕೆ ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಹಾಗೂ ದ್ರಾಕ್ಷಾರಸ ನಿಗಮದ ಅಧ್ಯಕ್ಷ ಕಾಂತಿಲಾಲ ಬನ್ಸಾಲಿ ಅವರು ಭೇಟಿ ನೀಡಿ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಸಂಗ್ರಹಿಸಿದರು.

ಈ ಸಹಾಯವಾಣಿ ಕೇಂದ್ರದಲ್ಲಿ ೯ ಜನರ ಒಂದು ತಂಡದಂತೆ ೩ ತಂಡದಲ್ಲಿ ಹಗಲಿರುಳು ಕೆಲಸ ಮಾಡುತ್ತಿರುವ ವಿಶ್ವವಿದ್ಯಾಲಯದ ಸಿಬ್ಬಂದಿಗಳು ಸಾರ್ವಜನಿಕರಿಂದ ಬರುವ ಕರೆಗಳಿಗೆ ಸಮಾಧಾನದಿಂದ ಮಾಹಿತಿ ನೀಡುವುದನ್ನು ಗಮನಿಸಿದರು. ಡಿ.ಡಿ.ಎಲ್.ಆರ್. ರವಿಕುಮಾರ, ಪ್ರಾಧ್ಯಾಪಕರುಗಳಾದ ಪ್ರವೀಣ ಅಂಕಲಕೋಟಿ, ಹಾಗೂ ಡಾ॥ನಾಗವೇಣಿ ಸಹಾಯವಾಣಿ ಕೇಂದ್ರದ ಕುರಿತು ಮಾಹಿತಿ ನೀಡಿದರು. ಗದಗ ಜಿಲ್ಲಾ ಆಡಳಿತದ ಅಡಿಯಲ್ಲಿ ಗ್ರಾಮೀಣ ಅಭಿವೃದ್ಧಿ ಪಂಚಾಯತರಾಜ್ ವಿಶ್ವವಿದ್ಯಾಲಯ ಕೊವಿಡ್ ಸೊಂಕಿತರಿಗೆ ಸಹಾಯವಾಣಿ ಕೇಂದ್ರದ ಮೂಲಕ ಸಮಾಜಮುಖಿಯ ಕಾರ್ಯ ಮಾಡುತ್ತಿರುವುದಕ್ಕೆ ಅಭಿನಂದಿಸಿದರು.

ಗುರುವಾರ 20.5.2021



ಗದಗ ನಗರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯದ ಕಟ್ಟಡದಲ್ಲಿ ಪ್ರಾರಂಭವಾಗಿರುವ ಕೋವಿಡ್ ಸಹಾಯವಾಣಿ ಕೇಂದ್ರಕ್ಕೆ ವಿಪ ಸದಸ್ಯ ಎಸ್.ವಿ. ಸಂಕನೂರ ಭೇಟಿ ನೀಡಿ ಮಾಹಿತಿ ಪಡೆದರು. ಕಾಂತಿಲಾಲ ಬನ್ಸಾಲಿ ಇದ್ದರು.

# ಕೋವಿಡ್ ಸಹಾಯವಾಣಿ ಕೇಂದ್ರಕ್ಕೆ ಸಂಕನೂರ ಭೇಟಿ



ಗದಗ, ೧೯ : ಜಿಲ್ಲೆಯಲ್ಲಿ ಕಳೆದ ೧೦ ದಿನಗಳಿಂದ ಕೊವಿಡ್ ಸೊಂಕಿತರಿಗೆ ಬೆಡ್ ಹಾಗೂ ಆ್ಯಂಬುಲೆನ್ಸ್ ಒದಗಿಸುವಲ್ಲಿ ಮತ್ತು ಲಸಿಕೆ ಕುರಿತು ಮಾಹಿತಿ ನೀಡುವಲ್ಲಿ ಕೊವಿಡ್ ಸಹಾಯವಾಣಿ ಕೇಂದ್ರದ ಸಿಬ್ಬಂದಿ ೨೪ ಗಂಟೆಗಳ ಕಾಲ ಕಾರ್ಯ ಮಾಡುತ್ತಿರುವುದನ್ನು ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಶ್ಲಾಘಿಸಿದ್ದಾರೆ.

ನಗರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ಕಟ್ಟಡದಲ್ಲಿ ಪ್ರಾರಂಭವಾಗಿರುವ ಕೊವಿಡ್ ಸಹಾಯವಾಣಿ ಕೇಂದ್ರಕ್ಕೆ ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಹಾಗೂ ದ್ರಾಕ್ಷಾರಸ ನಿಗಮದ ಅಧ್ಯಕ್ಷ ಕಾಂತಿಲಾಲ ಬನ್ಸಾಲಿ ಅವರು ಭೇಟಿ ನೀಡಿ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಸಂಗ್ರಹಿಸಿದರು.

ಈ ಸಹಾಯವಾಣಿ ಕೇಂದ್ರದಲ್ಲಿ ೯ ಜನರ ಒಂದು ತಂಡದಂತೆ ೩ ತಂಡದಲ್ಲಿ ಹಗಲಿರುಳು ಕೆಲಸ ಮಾಡುತ್ತಿರುವ ವಿಶ್ವವಿದ್ಯಾಲಯದ ಸಿಬ್ಬಂದಿಗಳು ಸಾರ್ವಜನಿಕರಿಂದ ಬರುವ ಕರೆಗಳಿಗೆ ಸಮಾಧಾನದಿಂದ ಮಾಹಿತಿ ನೀಡುವುದನ್ನು ಗಮನಿಸಿದರು. ಡಿ.ಡಿ.ಎಲ್.ಆರ್. ರವಿಕುಮಾರ, ಪ್ರಾಧ್ಯಾಪಕರುಗಳಾದ ಪ್ರವೀಣ ಅಂಕಲಕೋಟಿ, ಹಾಗೂ ಡಾ॥ನಾಗವೇಣಿ ಸಹಾಯವಾಣಿ ಕೇಂದ್ರದ ಕುರಿತು ಮಾಹಿತಿ ನೀಡಿದರು. ಗದಗ ಜಿಲ್ಲಾ ಆಡಳಿತದ ಅಡಿಯಲ್ಲಿ ಗ್ರಾಮೀಣ ಅಭಿವೃದ್ಧಿ ಪಂಚಾಯತರಾಜ್ ವಿಶ್ವವಿದ್ಯಾಲಯ ಕೊವಿಡ್ ಸೊಂಕಿತರಿಗೆ ಸಹಾಯವಾಣಿ ಕೇಂದ್ರದ ಮೂಲಕ ಸಮಾಜಮುಖಿಯ ಕಾರ್ಯ ಮಾಡುತ್ತಿರುವುದಕ್ಕೆ ಅಭಿನಂದಿಸಿದರು.